ವಾಕ್ಯಗಳು, ಸಂದರ್ಭಕ್ಕಾಗಿ ಸಜ್ಜುಗೊಂಡ ಪ್ರಸಂಗಗಳು, ಅನಿರೀಕ್ಷಿತ ಪಂಚ್ ಲೈನ್‌ಗಳು, ಮೆಲ್ಲಗೆ ಹೊರಬರುವ ಕಿಲಾಡಿ ಹಾಸ್ಯ, ತಿವಿಯುವ ವ್ಯಂಗ್ಯ... ಎಲ್ಲವೂ ಸೇರಿದ ಅವರ ನೇರ, ಜೀವಂತ ಭಾಷಣಗಳು ಚಳವಳಿಗೆ ಹೊಸ ಹೊಸ ಹುಡುಗರನ್ನು ಆಕರ್ಷಿಸಿದವು. ದಲಿತ ಚಳವಳಿಯಲ್ಲಿ ಮಾತ್ರವಲ್ಲದೆ, ಕಮ್ಯುನಿಸ್ಟ್ ಚಳವಳಿ, ಬಂಡಾಯ ಸಂಘಟನೆ, ವೈಚಾರಿಕ ಸಭೆಗಳು... ಹೀಗೆ ಎಲ್ಲ ಕಡೆ ಈ ಹುಡುಗರು ಕಾಣತೊಡಗಿದರು. ಸಿದ್ಧಲಿಂಗಯ್ಯನವರು ಬರೆದ ಪದ್ಯಗಳು ಯಾರ ವಿವರಣೆಯನ್ನೂ ಬೇಡದೆ ನೇರವಾಗಿ ಹಸಿವಿನಿಂದ ಸತ್ತೋರ ಸಮುದಾಯಗಳನ್ನು, ಸೈಜುಗಲ್ಲು ಹೊತ್ತೋರ ಮಕ್ಕಳನ್ನು, 'ನನ್ನ ಜನಗಳ'ನ್ನು ತಲುಪುತ್ತಿದ್ದವು. ಅವರ ಪದ್ಯಗಳು ತುರ್ತು ಪರಿಸ್ಥಿತಿಯ ಸರ್ವಾಧಿಕಾರದ ನಡುವೆಯೂ ಜನಮಾನಸದಲ್ಲಿ ಪ್ರತಿಭಟನೆಯ ದನಿಯನ್ನು ಮೂಡಿಸಿದ್ದವು. ಹೊಸ ತಲೆಮಾರಿನ ವೈಚಾರಿಕ ಹುಡುಗ, ಹುಡುಗಿಯರು ಕಾಲೇಜುಗಳಲ್ಲಿ, ಕ್ಯಾಂಪಸ್ಸುಗಳಲ್ಲಿ ತಲೆಯೆತ್ತಿ ಓಡಾಡಲು ದಲಿತ ಚಳವಳಿಯೂ ಕಾರಣವಾಗಿತ್ತು; ಸಿದ್ಧಲಿಂಗಯ್ಯನವರ ಹಾಡುಗಳಿಗೆ ಜನ್ನಿ ಹಾಕಿಕೊಟ್ಟ ಪರಿಣಾಮಕಾರಿ ಟ್ಯೂನುಗಳು ಸ್ವಾಭಿಮಾನಿ ಹಾಡುಗಾರರ ಸಹಜ ಕಂಠಗಳಿಗೆ ಸುಲಭವಾಗಿ ಎಟಕುವಂತಿದ್ದವು. ಜನ್ನಿ, ಪಿಚ್ಚಳ್ಳಿ ನಿವಾಸರ ಹಾದಿಯಲ್ಲಿ ಹೋರಾಟದ ಹಾಡುಗಳನ್ನು ಹಾಡುವ ಸಾವಿರಾರು ಗಾಯಕರು ಕರ್ನಾಟಕದ ತುಂಬ ಹುಟ್ಟಿಕೊಂಡರು. ಆ ಗಾಯಕ ಪಡೆ ಇವತ್ತಿಗೂ ಬೆಳೆಯುತ್ತಲೇ ಇದೆ.

ಸಿದ್ಧಲಿಂಗಯ್ಯನವರ ಪದ್ಯಗಳು 'ಚಳವಳಿ ಜಾನಪದ'ದ ಭಾಗಗಳಾದವು. ಸಿ.ಜಿ.ಕೆ, ಗಂಗಾಧರಸ್ವಾಮಿ, ಪ್ರಸನ್ನ ಮೊದಲಾದವರು ಮುನ್ನಡೆಸಿದ ಚಾರಿತ್ರಿಕ 'ಸಮುದಾಯ' ಜಾಥಾದಲ್ಲಿ ಸಿದ್ಧಲಿಂಗಯ್ಯನವರ ಹಾಡುಗಳು ಎಲ್ಲೆಡೆ ತಲುಪಿದವು. 'ನನ್ನ ಜನದ ಜೊತೆ ನಾನಾಡುವ ಮಾತು... ನಾನು ಕೊಡುವ ಕವನ' ಎಂಬ ಕಾವ್ಯತತ್ತ್ವವನ್ನು ರೂಪಿಸಿಕೊಂಡು ಕವಿತೆಗಳನ್ನು ಬರೆದ ಸಿದ್ಧಲಿಂಗಯ್ಯ, ದಲಿತರ ಸ್ಥಿತಿಗತಿಗಳನ್ನು ನೇರವಾಗಿ ತಲುಪಿಸುವ 'ಪಂಚಮ', 'ನೆಲಸಮ' ಬೀದಿ ನಾಟಕಗಳನ್ನು ಬರೆದರು; ಇವು ಸಾವಿರಾರು ಪ್ರದರ್ಶನಗಳನ್ನು ಕಂಡವು. ಬ್ರೆಕ್ಟ್ ನಾಟಕಗಳಿಂದ ಹಿಡಿದು ರಂಗಭೂಮಿಗೂ ವೈಚಾರಿಕ ಹಾಡುಗಳನ್ನು ಬರೆದ ಸಿದ್ಧಲಿಂಗಯ್ಯ ಮುಂದೆ ಪೂರ್ಣ ಪ್ರಮಾಣದ 'ಏಕಲವ್ಯ' ನಾಟಕ ಬರೆದರು. ಸಿದ್ಧಲಿಂಗಯ್ಯನವರ ಏಕಲವ್ಯ ದ್ರೋಣಾರ್ಜುನರ ಸಂಚಿಗೆ ಬಲಿಯಾಗಿ ಬಲಗೈ ಹೆಬ್ಬೆರಳನ್ನು ಕೊಟ್ಟರೂ, ಎಡಗೈಯಲ್ಲಿ ಬಿಲ್ವಿದ್ಯೆ ಕಲಿಯಲು ಶುರು ಮಾಡುತ್ತಾನೆ. ಆ ಮೂಲಕ ಹೊಸ ಏಕಲವ್ಯ ಬುಡಕಟ್ಟು ಸಮುದಾಯಗಳ, ಹಾಗೂ ಶಿಕ್ಷಣದಿಂದ ವಂಚಿತರಾದ ಎಲ್ಲ ಸಮುದಾಯಗಳ ಹೊಸ ಕಾಲದ ಛಲವನ್ನು ನೇರವಾಗಿ ಸಾರುತ್ತಾನೆ.

ಸುಮಾರು ಎರಡು ದಶಕಗಳ ಕಾಲ ದಣಿವರಿಯದೆ ಹಾಗೂ ದಣಿವುಂಡು ಕರ್ನಾಟಕದ ಮೂಲೆಮೂಲೆಗಳಲ್ಲಿ ನಡೆದ ದಲಿತಪರ ಪ್ರತಿಭಟನೆಗಳು, ಶೋಷಿತರ ರ್‍ಯಾಲಿಗಳಲ್ಲಿ ಸಿದ್ಧಲಿಂಗಯ್ಯ ಪಾಲ್ಗೊಂಡರು. ಎಲ್ಲ ದಿಕ್ಕುಗಳಿಂದ ಬರುತ್ತಿದ್ದ ಒತ್ತಾಯದ ಆಹ್ವಾನಗಳನ್ನು ನಿಭಾಯಿಸಲಾಗದೆ ಎಷ್ಟೋ ಸಲ ಒಪ್ಪಿಕೊಂಡು ತಪ್ಪಿಸಿಕೊಳ್ಳುವುದೂ ಅವರಿಗೆ ಅನಿವಾರ್ಯವಾಯಿತು. ಆದರೂ ಎಲ್ಲ ದಲಿತ ರ್‍ಯಾಲಿಗಳಲ್ಲೂ ಅವರ ಛಾಪು ಇದ್ದೇ ಇರುತ್ತಿತ್ತು; ಅವರಿಲ್ಲದಿದ್ದರೂ ಅವರ ಹಾಡುಗಳು ಮೊಳಗುತ್ತಿದ್ದವು; ಹಾಡಿನ ಸಾಲುಗಳು ಗೋಡೆ ಬರಹಗಳಾಗಿದ್ದವು. 'ದಲಿತರು ಬರುವರು ದಾರಿ ಬಿಡಿ, ದಲಿತರ ಕೈಗೆ ರಾಜ್ಯ ಕೊಡಿ' ಸಾಲು ಮೊದಲು ಘೋಷಣೆಯಂತೆ ಕಂಡಿದ್ದರೂ ನಂತರ ಅದು ಎಲ್ಲೆಡೆ ಪ್ರತಿಧ್ವನಿಸಿ ದಲಿತ ಸಮುದಾಯದ ಖಡಕ್ಕಾದ ರಾಜಕೀಯ ಪ್ರತಿಪಾದನೆಯೇ ಆಯಿತು. ಕವಿತೆಯೊಂದರ ಸಾಲು ರಾಜಕಾರಣದಲ್ಲಿ, ಅಸಮಾನತೆಯ ಸಮಾಜದಲ್ಲಿ ಸಾಕಾರವಾದ ಕಾಲ ಅದು. ಅಂದರೆ, ನಾಡಿನ ಗೋಡೆಗಳ ಮೇಲಿನ ಬರಹ ನಾಡಿನಲ್ಲಿ ಜಾರಿಯಾಗತೊಡಗಿತ್ತು: ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ನಾಯಕತ್ವಗಳನ್ನು ದಲಿತರು ಎಲ್ಲೆಡೆ ಕೈಗೆತ್ತಿಕೊಳ್ಳುತ್ತಿದ್ದರು.